ಜಾತಿ–ಧರ್ಮಾತೀತವಾಗಿ ಎಲ್ಲವನ್ನೂ ನನ್ನ ತೆಕ್ಕೆಗೆ ತೆಗೆದುಕೊಳ್ಳುವುದು, ಪು.ತಿ.ನ. ಅವರು ನನಗೆ ಹೇಳಿಕೊಟ್ಟ ಆದರ್ಶ. ಇದರಲ್ಲೇನಾದರೂ ಜಾತೀಯತೆ ಅಥವಾ ಪಕ್ಷಪಾತವೇನಾದರೂ ಇದೆಯೇ? ನನ್ನ ಬರವಣಿಗೆಯಲ್ಲಿ, ಸ್ಪಂದನಗಳಲ್ಲಿ ಜಾತೀಯತೆ ಕಾಣಿಸುತ್ತದೆಯೇ?

ಕ್ರಾಂತಿ ಎನ್ನುವುದನ್ನು ಕೆಲವರಷ್ಟೇ ಮಾಡಲು ಸಾಧ್ಯ. ಅದನ್ನು ಮಾಡುವವರಿಗೆ ಬೇರೆಯದೇ ಮನೋಧರ್ಮ ಇರಬೇಕಾಗುತ್ತದೆ. ಅದನ್ನು ಮಾಡುವವರು ಚೆನ್ನಾಗಿಯೇ ಮಾಡುತ್ತಿದ್ದಾರೆ. ನಾನೂ ಅದನ್ನೇ ಮಾಡಬೇಕು ಎಂದು ಬಲವಂತ ಮಾಡಬಾರದು. ನರಸಿಂಹಸ್ವಾಮಿ, ಅಡಿಗರು, ಕುವೆಂಪು ಎಲ್ಲರದೂ ಬೇರೆ ಬೇರೆ ವಿಚಾರಗಳು, ಬರವಣಿಗೆಯ ಕ್ರಮಗಳು. ಕುವೆಂಪು ಅವರ ಬರಹ–ವಿಚಾರಗಳು ನಿಜಕ್ಕೂ ಅಪೇಕ್ಷಣೀಯವಾದವು. ಆದರೆ, ಬೇಂದ್ರೆಯವರೂ ಹಾಗೆಯೇ ಬರೆದಿಲ್ಲ ಎಂದು ಹೇಳುವುದು ಸರಿಯಲ್ಲ. ಅವರಿಗೆ ಅವರದೇ ಆದ ಮನೋಧರ್ಮವಿದೆ. ನನಗೂ ಅಷ್ಟೇ – ನಮ್ಮ ಪರಂಪರೆಯನ್ನು ಹೊಸ ಪೀಳಿಗೆಗೆ ದೊರಕಿಸಬೇಕು ಎನ್ನುವುದು ನನ್ನ ಕಾಳಜಿ. ಸೇಡಿಯಾಪು ಅವರಂಥ ವಯ್ಯಾಕರಣಿಗಳು ತಮ್ಮ ಜೀವಮಾನವನ್ನಿಡೀ ಭಾಷೆಗಾಗಿ ಕಳೆದರು. ಅವರ ಸಾಧನೆಯನ್ನು ಅಲಕ್ಷಿಸಲಾದೀತೆ? ಎ.ಕೆ. ರಾಮಾನುಜನ್ ಅವರು ವಿಶ್ವದ ಯಾವುದೋ ಭಾಗದಲ್ಲಿ ಕೂತು ವಚನಗಳನ್ನು ಇಂಗ್ಲಿಷ್‌ಗೆ ಭಾಷಾಂತರಿಸಿ ಅವುಗಳಿಗೆ ವಿಶ್ವಮಾನ್ಯತೆ ದೊರಕಿಸಿಕೊಟ್ಟದ್ದು ಕಡಿಮೆ ಸಾಧನೆಯೇ? ಯಾವ ರೀತಿಯ ಕೆಲಸ ಮಾಡಿದಾಗ ನನ್ನನ್ನು ಸಂಪೂರ್ಣವಾಗಿ ಪ್ರಕಟಪಡಿಸಬಹುದು, ಯಾವ ಮಾರ್ಗದಲ್ಲಿ ಸಾಗಿದಾಗ ನಮ್ಮ ವ್ಯಕ್ತಿತ್ವ ಪೂರ್ಣ ಪ್ರಮಾಣದಲ್ಲಿ ಅರಳಬಹುದು – ಇದರ ಆಯ್ಕೆಯನ್ನು ಕವಿಗೇ ಬಿಡಬೇಕು. ಅ.ನ.ಕೃ. ಅವರು ಕನ್ನಡ ಚಳವಳಿ ಕೆಲಸ ಮಾಡಿದರು. ಅದು ಅಗತ್ಯವಾಗಿದ್ದ ಕೆಲಸ. ಅದನ್ನೇ ಕಾರಂತರೂ ಮಾಡಬೇಕೆಂದು ಬಯಸುವುದು ಸರಿಯಾಗಲಾರದು. ಅಸಾಮಾಜಿಕವಾದ ಕೆಲಸವನ್ನು ನಾನು ಮಾಡಿದ್ದೇನೆಯೇ ಎನ್ನುವುದು ಆತ್ಮಪರೀಕ್ಷೆಯ ಸಂಗತಿ. ಯಾವ ಲೇಖಕನೂ ಅಂತರಂಗದಲ್ಲಿ ಸಮಾಜವಿಮುಖಿಯಾಗಲಿಕ್ಕೆ ಸಾಧ್ಯವಿಲ್ಲ. ನನ್ನ ಹಳ್ಳಿ, ನನ್ನ ಜನ, ನನ್ನ ಶಿಷ್ಯರು, ಸ್ನೇಹಿತರು – ಇವರೊಂದಿಗಿನ ನನ್ನ ಸಂಬಂಧ ಯಾವ ಬಗೆಯದೆನ್ನುವುದನ್ನು ನೋಡಬೇಕು. ಎಚ್.ಎಸ್.ವಿ. ಹೇಗೆ ಎನ್ನುವ ಪ್ರಶ್ನೆಯನ್ನು ನೀವು ನನ್ನ ಶಿಷ್ಯರನ್ನು ಕೇಳಬೇಕು.

ಸಾಮಾಜಿಕ ಜವಾಬ್ದಾರಿ ಎನ್ನುವುದು ಇಷ್ಟೇ – ನನಗೆ ಅನ್ನ ಕೊಟ್ಟ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ನಿಸ್ಪೃಹವಾಗಿ ಪಾಠ ಮಾಡುವುದು. ಅದನ್ನು ನಾನು ಮಾಡಿದ್ದೇನೆ. ಕೆಲವರು ವಿದ್ಯಾರ್ಥಿಗಳನ್ನು ಚೆನ್ನಾಗಿ ತಯಾರು ಮಾಡಿ, ಹೊರಗೂ ಚೆನ್ನಾಗಿ ಕೆಲಸ ಮಾಡಬಲ್ಲರು. ಅದವರ ಸಾಮರ್ಥ್ಯ. ನನ್ನ ಮಾಧ್ಯಮ ಯಾವುದೋ ಅದರಲ್ಲಿ ನಾನೇನು ಮಾಡಬಹುದೋ ಅದನ್ನು ಶ್ರದ್ಧೆಯಿಂದ ಮಾಡಿರುವೆ.

◆ **ಕೊನೆಯದಾಗಿ ಮತ್ತೆ ಊರಿನ ವಿಷಯಕ್ಕೆ ಬರೋಣ. ಈಗ ನಿಮ್ಮ ಊರು ಹೇಗಿದೆ?**

ಊರುಗಳೆಲ್ಲ ಮರುಭೂಮಿಗಳಂತಾಗಿವೆ. ವಲಸೆ ಭಾರತದ ಅಂತಃಸತ್ವವನ್ನು ಹೀರಿ ಎಲ್ಲೋ ಹೋಗುತ್ತಿದೆ – ಬಿತ್ತಕ್ಕೆ ಬೀಜದ ಚಿಂತೆ ಇಲ್ಲ ಎನ್ನುವಂತೆ. ಊರಿನಲ್ಲೀಗ ಗೊಂಬೆಮೇಳ ನಡೆಯುತ್ತಿಲ್ಲ. ತರುಣರ ಸಂಖ್ಯೆ ಕಡಿಮೆಯಾಗುತ್ತಿದೆ. ಹಿರಿಯರಷ್ಟೇ ಉಳಿದಿದ್ದಾರೆ. ಈ ಪಲಾಯನ, ವ್ಯಕ್ತಿಗಷ್ಟೇ ಸೀಮಿತವಾದುದಲ್ಲ; ನೆನಪುಗಳೂ ಪರಂಪರೆಯೂ ಊರುಬಿಡುತ್ತಿವೆ. ಬೇಂದ್ರೆಯವರ ಪೆನ್ನು ಏನಾಯಿತು, ಚೌಡಯ್ಯನವರ ಪಿಟೀಲು ಏನಾಯಿತು ಎಂದು ಕಲ್ಪಿಸಿಕೊಳ್ಳಿ. ಸಮಾಧಾನಕರ ಸಂಗತಿ ಎಂದರೆ ಇವತ್ತಿನ ಬರಹಗಾರರು ತುಂಬಾ ಚೆನ್ನಾಗಿ ಬರೆಯುತ್ತಿದ್ದಾರೆ. ಬದುಕಿನ ಅನೇಕ ಕ್ಷೇತ್ರಗಳಿಂದ ಬರಹಗಾರರು ರೂಪುಗೊಳ್ಳುತ್ತಿರುವುದು ಸಂತೋಷವನ್ನುಂಟುಮಾಡುತ್ತದೆ. ಈ ಸಂವೇದನೆಗಳು ಖಾಲಿಯಾದ ಜಾಗಗಳನ್ನು ತುಂಬುವ ಪ್ರಯತ್ನ ಮಾಡುತ್ತವೆ. ●